ವಿಕ ಪ್ರಸ್ತುತಿ
ಇದು ಚುನಾವಣೆ ರಾಜಕೀಯ ಆಟ
GRAMENER ಸಹಯೋಗದೊಂದಿಗೆ

ಚುನಾವಣೆ ಸಮೀಪಿಸುತ್ತಿರುವಂತೆಯೇ ಜಾತಿಯ ಲೆಕ್ಕಾಚಾರಗಳನ್ನು ಆಧರಿಸಿದ ಸಮೀಕ್ಷೆ ಆರಂಭವಾಗಿಬಿಡುತ್ತದೆ. ವಿಜಯ ಕರ್ನಾಟಕ ಡೇಟಾ ವಿಷುವಲೈಸೇಷನ್ ಮೂಲಕ ರಾಜ್ಯದ ಜಾತಿ ಲೆಕ್ಕಾಚಾರಗಳನ್ನು ವಿಭಿನ್ನವಾಗಿ ಮುಂದಿಡುತ್ತಿದೆ.

ಇಲ್ಲಿ ನೀಡಲಾಗಿರುವುದು ವಿವಿಧ ಮೂಲಗಳಿಂದ ಸಂಗ್ರಹಿಸಲಾದ ಅಂದಾಜು ಜಾತಿ ಲೆಕ್ಕಾಚಾರ.

ಸರ್ವ ಜನಾಂಗದ ಶಾಂತಿಯ ತೋಟ

ಒಂದೆಡೆ ನಮ್ಮ ಸಮಾಜ ಜಾತೀಯತೆಯನ್ನು ಮೀರಿ ಬೆಳೆಯುತ್ತಿರುವಾಗಲೇ ಪ್ರತಿ ಬಾರಿ ಚುನಾವಣೆಗಳು ಮತ್ತೆಮತ್ತೆ ಸಮಾಜದೊಳಗಿನ ಜಾತಿ ಪ್ರಜ್ಞೆಯನ್ನು ಬಡಿದೆಬ್ಬಿಸಿಬಿಡುತ್ತವೆ. ರಾಜಕೀಯ ಪಕ್ಷಗಳಿಂದ ಹಿಡಿದು ಅಭ್ಯರ್ಥಿಗಳವರೆಗೆ ಎಲ್ಲರೂ ಸಜಾತಿ- ವಿಜಾತಿಗಳ ಪಟ್ಟಿ ಹಿಡಿದುಕೊಂಡು ಲೆಕ್ಕಾಚಾರ ಆರಂಭಿಸಿಬಿಡುತ್ತಾರೆ. ಅದುವರೆಗೂ ಸುಮ್ಮನಿದ್ದ ಜಾತೀಯ ಸಂಘಟನೆಗಳು ಒಮ್ಮಿಂದೊಮ್ಮೆಗೆ ಚುರುಕಾಗಿಬಿಡುತ್ತವೆ. ಒಂದು ಬಗೆಯಲ್ಲಿ ಎಲ್ಲರಲ್ಲೂ ಸಾಮುದಾಯಿಕ ಪ್ರಜ್ಞೆ ಗರಿಗೆದರಿಬಿಡುತ್ತವೆ.

ಕರ್ನಾಟಕದಲ್ಲಿ ಇಂಥ ಜಾತೀಯ ಗಣಿತಗಳು ಲಾಗಾಯ್ತಿನಿಂದಲೂ ನಡೆದುಕೊಂಡು ಬರುತ್ತಿವೆ. ಪ್ರತಿಯೊಂದು ಪಕ್ಷಗಳು ತಮ್ಮದೇ ಆದ ವೋಟ್‌ಬ್ಯಾಂಕ್‌ನ್ನು ಸೃಷ್ಟಿಸಿಕೊಳ್ಳಲು ಪ್ರಯತ್ನಿಸುತ್ತವೆ. ಕಾಲದಿಂದ ಕಾಲಕ್ಕೆ ರಾಜ್ಯದಲ್ಲಿ ಜಾತೀಯ ಸಮೀಕರಣಗಳು ಬದಲಾಗುತ್ತಲೇ ಇರುತ್ತವೆ ಎನ್ನುವುದನ್ನು ಈವರೆಗೆ ನಡೆದಿರುವ ರಾಜಕೀಯ ಘಟನಾವಳಿಗಳು ಸ್ಪಷ್ಟಪಡಿಸುತ್ತವೆ. ಹಾಗೆಯೇ ನಿರ್ದಿಷ್ಟ ಸಮುದಾಯದ ಒಲವು-ನಿಲುವುಗಳು ಕಾಲದಿಂದ ಕಾಲಕ್ಕೆ ಬದಲಾಗುತ್ತಾ ಬರಬಹುದು.

ರಾಜ್ಯದಲ್ಲಿ ಈಚೆಗೆ ಜಾತಿಗಣತಿ ನಡೆದಿಲ್ಲವಾದರೂ ಹಳೆಯ ಗಣತಿಯನ್ನೇ ಆಧರಿಸಿ ರಾಜಕೀಯ ವಿಶ್ಲೇಷಕರು, ರಾಜಕಾರಣಿಗಳು ಹೊಸ ಲೆಕ್ಕಾಚಾರ ಮಂಡಿಸುತ್ತಲೇ ಬರುತ್ತಿದ್ದಾರೆ. 1931ರಲ್ಲಿ ಬ್ರಿಟಿಷ್ ಸರಕಾರ ಇದ್ದಾಗ ಮೊದಲ ಬಾರಿಗೆ ಜಾತಿಗಣತಿ ನಡೆದಿತ್ತು. ಆ ನಂತರ 1975ರಲ್ಲಿ ದೇವರಾಜ ಅರಸು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಎಲ್.ಜಿ.ಹಾವನೂರು ಅಧ್ಯಕ್ಷತೆಯ ಹಿಂದುಳಿದ ವರ್ಗಗಳ ಆಯೋಗ ಜಾತಿ ಸಮೀಕ್ಷೆ ನಡೆಸಿತ್ತು. ಆ ನಂತರ 1986ರಲ್ಲಿ ಟಿ.ವೆಂಕಟಸ್ವಾಮಿ ನೇತೃತ್ವದ ಹಿಂದುಳಿದ ವರ್ಗಗಳ ಆಯೋಗ ಜಾತಿ ಸಮೀಕ್ಷೆ ನಡೆಸಿತ್ತು. ಈ ಆಯೋಗ ನೀಡಿದ ವರದಿ ಪ್ರಕಾರ, ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಲಿಂಗಾಯತ ಸಮುದಾಯ ಶೇ 15.42ರಷ್ಟು ಹಾಗೂ ಒಕ್ಕಲಿಗ ಸಮುದಾಯದ ಪ್ರಮಾಣ ಶೇ 10.64ರಷ್ಟಿದೆ ಎಂದು ಹೇಳಲಾಗಿದೆ.

ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಜನಾಂಗದ ಪ್ರಮಾಣ ಶೇ 23ರಷ್ಟಿದ್ದರೆ, ಕುರುಬರ ಪ್ರಮಾಣ ಶೇ 8ರಷ್ಟು ಹಾಗೂ ಮುಸ್ಲಿಂ ಸಂಖ್ಯೆ ಶೇ 10ರಷ್ಟು ಇದೆ ಎನ್ನುವ ಅಂದಾಜಿದೆ. ಈ ಅಂದಾಜನ್ನು ಇಟ್ಟುಕೊಂಡೇ ಪ್ರತಿ ಚುನಾವಣೆ ಸಂದರ್ಭದಲ್ಲಿ ಜಾತಿ ಲೆಕ್ಕಾಚಾರ ನಡೆಯುತ್ತದೆ.

ಸಾಮಾನ್ಯವಾಗಿ ಉತ್ತರ ಕರ್ನಾಟಕ ಮತ್ತು ಮಧ್ಯ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಲಿಂಗಾಯತ ಪ್ರಾಬಲ್ಯ ಇವೆ ಹಾಗೂ ದಕ್ಷಿಣ ಕರ್ನಾಟಕದ ಮೈಸೂರು, ಮಂಡ್ಯ, ಹಾಸನ, ರಾಮನಗರ, ಕೋಲಾರ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಒಕ್ಕಲಿಗ ಸಮುದಾಯದವರು ಇದ್ದಾರೆ.

ಒಕ್ಕಲಿಗ ಮತ್ತು ಲಿಂಗಾಯತ ಸಮುದಾಯಗಳು ಆರಂಭದಿಂದಲೂ ರಾಜಕೀಯ ಪ್ರಾಬಲ್ಯಕ್ಕಾಗಿ ಪೈಪೋಟಿ ನಡೆಸುತ್ತಿರುವುದು ಸುಸ್ಪಷ್ಟ. ಕರ್ನಾಟಕ ಏಕೀಕರಣದ ಸಂದರ್ಭದಲ್ಲಿ ಈ ಎರಡು ಸಮುದಾಯಗಳ ರಾಜಕೀಯ ಪ್ರಾಬಲ್ಯವನ್ನು ದೇವರಾಜ ಅರಸು ಅವರು ಮುರಿದು ಹಿಂದುಳಿದ ವರ್ಗ, ಅಲ್ಪಸಂಖ್ಯಾತರು ಹಾಗೂ ಪರಿಶಿಷ್ಟ ಸಮುದಾಯದ ಹೊಸ ಸಮೀಕರಣವನ್ನು ರೂಪಿಸಿ ಯಶಸ್ವಿಯೂ ಆದರು. ಅಂದಿನಿಂದ ಅಲ್ಪಸಂಖ್ಯಾತರು, ಹಿಂದುಳಿದ ವರ್ಗ ಹಾಗೂ ಪರಿಶಿಷ್ಟ ಸಮುದಾಯ ಕಾಂಗ್ರೆಸ್‌ನ ವೋಟ್‌ಬ್ಯಾಂಕ್ ಎಂದೇ ಭಾವಿಸಲಾಗುತಿತ್ತು.

ಆದರೆ ಕಳೆದ ದಶಕದಲ್ಲಿ ಸಮೀಕರಣಗಳು ಮತ್ತೆ ಬದಲಾದವು. ಒಂದು ಕಾಲದಲ್ಲಿ ಕಾಂಗ್ರೆಸ್ ಬೆಂಬಲಿಸಿದ್ದ ಲಿಂಗಾಯತರು 80ರ ದಶಕದಲ್ಲಿ ಜನತಾ ಪರಿವಾರದತ್ತ ಒಲವು ಬದಲಿಸಿದರು. ಆದರೆ ಈ ದಶಕದಲ್ಲಿ ಬಿ.ಎಸ್.ಯಡಿಯೂರಪ್ಪ ನಾಯಕತ್ವದ ಬಿಜೆಪಿ ಲಿಂಗಾಯತ ಸಮುದಾಯವನ್ನು ತನ್ನ ವೋಟ್‌ಬ್ಯಾಂಕ್‌ನ್ನಾಗಿ ಪರಿವರ್ತಿಸಿಕೊಂಡಿತು. ಪರಿಸ್ಥಿತಿ ಈಗ ಬದಲಾಗಿದೆ. ಯಡಿಯೂರಪ್ಪ ಬಿಜೆಪಿ ತೊರೆದು ಕೆಜೆಪಿ ಸೇರಿಕೊಂಡಿರುವುದರಿಂದ ಮತ್ತೊಮ್ಮೆ ಜಾತಿ ಸಮೀಕರಣ ಬದಲಾಗುವ ಸಾಧ್ಯತೆಗಳೂ ಕಾಣಿಸುತ್ತಿವೆ. ಲಿಂಗಾಯತ ಸಮುದಾಯ ತಮ್ಮದೇ ಸಮುದಾಯದ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅವರ ಬಿಜೆಪಿಯನ್ನು ಬೆಂಬಲಿಸುವರೇ ಅಥವಾ ಯಡಿಯೂರಪ್ಪ ನೇತೃತ್ವದ ಕೆಜೆಪಿಯನ್ನು ಬೆಂಬಲಿಸುವರೇ ಎನ್ನುವುದು ನಿಗೂಢ.

ಮತ್ತೊಂದು ಪ್ರಬಲ ಸಮುದಾಯ ಒಕ್ಕಲಿಗರು ಜೆಡಿಎಸ್‌ನ್ನು ಬೆಂಬಲಿಸುತ್ತಿದ್ದಾರೆ ಎನ್ನುವುದು ವಿಶ್ಲೇಷಕರ ಪ್ರತಿಪಾದನೆ. ಆರಂಭದಿಂದಲೂ ಕಾಂಗ್ರೆಸ್ ವೋಟ್ ಬ್ಯಾಂಕ್ ಎಂದೇ ಪರಿಗಣಿತವಾಗಿದ್ದ ಪರಿಶಿಷ್ಟ ಸಮುದಾಯ ಕಳೆದ ಬಾರಿ ಬಿಜೆಪಿಯನ್ನು ಬೆಂಬಲಿಸಿದ್ದನ್ನು ಕಡೆಗಣಿಸಲಾಗದು. ಒಂದು ಹಂತದಲ್ಲಿ ಅಲ್ಪಸಂಖ್ಯಾತರ ವೋಟ್‌ಬ್ಯಾಂಕ್‌ನ್ನು ತನ್ನದಾಗಿಸಿಕೊಳ್ಳಲು ಜನತಾ ಪರಿವಾರ ಯಶಸ್ವಿಯಾಗಿತ್ತು.ಈಗ ಮತ್ತೆ ದಲಿತರು ಮತ್ತು ಅಲ್ಪಸಂಖ್ಯಾತರ ಮತಬ್ಯಾಂಕ್‌ನ ಮೇಲೆ ಕಾಂಗ್ರೆಸ್ ಕಣ್ಣಿಟ್ಟಿದೆ.

1 ನಾವೇ ನಂಬರ್ ಒನ್

ಇದು ಬಣ್ಣ ಬಣ್ಣದ ಕರ್ನಾಟಕ. ರಾಜ್ಯದಲ್ಲಿರುವ ವಿವಿಧ ಸಮುದಾಯಗಳನ್ನು ಕಾರ್ಟೋಗ್ರಾಮ್ ಮೂಲಕ ನೋಡಿದರೆ ಕರ್ನಾಟಕ ಹೀಗೆ ಕಾಣುತ್ತದೆ. ಇದು ರಾಜ್ಯದ ವಿವಿಧ ಕ್ಷೇತ್ರಗಳಲ್ಲಿನ ಅತಿ ಹೆಚ್ಚಿನ ಸಂಖ್ಯೆಯಲ್ಲಿರುವ ಜಾತಿಗಳನ್ನು ಸೂಚಿಸುವ ನಕ್ಷೆ. ಅತಿ ಹೆಚ್ಚು ಎಂದರೆ, ನಿರ್ದಿಷ್ಟ ಕ್ಷೇತ್ರಗಳಲ್ಲಿನ ಒಟ್ಟು ಜನಸಂಖ್ಯೆಯಲ್ಲಿ ಅತಿ ಹೆಚ್ಚು ಯಾವ ಸಮುದಾಯ ನೆಲೆಸಿದೆಯೋ ಆ ಸಮುದಾಯದ ಬಗ್ಗೆ ಕ್ಷಿಪ್ರ ಚಿತ್ರಣ ನೀಡುತ್ತದೆ ಈ ನಕ್ಷೆ.

ವಿವಿಧ ಮೂಲಗಳಿಂದ ಪಡೆದುಕೊಳ್ಳಲಾಗಿರುವ ಮಾಹಿತಿಗಳನ್ನು ಆಧರಿಸಿ ಈ ಕಾರ್ಟೋಗ್ರಾಮ್‌ನ್ನು ಸಿದ್ಧಪಡಿಸಲಾಗಿದೆ.

ಒಂದೊಂದು ಬಣ್ಣವೂ ಒಂದೊಂದು ಜಾತಿಯನ್ನು ಸೂಚಿಸುತ್ತದೆ. ಉದಾಹರಣೆಗೆ : ಇಲ್ಲಿ ನೀಡಲಾಗಿರುವ ನೀಲಿ ಬಣ್ಣ ಲಿಂಗಾಯತ ಸಮುದಾಯವನ್ನು ಸೂಚಿಸುತ್ತದೆ. ಈ ನಕ್ಷೆಯನ್ನು ನೋಡಿದರೆ ನಿಮಗೆ ಮನದಟ್ಟಾಗಬಹುದು- ಉತ್ತರ ಕರ್ನಾಟಕ ಭಾಗದಲ್ಲಿ ಲಿಂಗಾಯತ ಸಮುದಾಯದ ಪ್ರಾಬಲ್ಯ ಇದೆ ಎನ್ನುವುದು. ರಾಜ್ಯದ ಮಧ್ಯ ಕರ್ನಾಟಕ ಮತ್ತು ಉತ್ತರ ಕರ್ನಾಟಕದ ಸುಮಾರು 70ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಅತಿ ಹೆಚ್ಚಿನ ಸಂಖ್ಯೆಯ ಸಮುದಾಯ ಲಿಂಗಾಯತರದೇ. ಅಂದರೆ, ರಾಜಕೀಯವಾಗಿ ಇವರೇ ಪ್ರಬಲರು ಮತ್ತು ನಿರ್ಣಾಯಕರು. ಅಷ್ಟೇ ಅಲ್ಲದೆ, ಇಲ್ಲಿನ ಬಹುತೇಕ ಕ್ಷೇತ್ರಗಳಲ್ಲಿ ಈ ಸಮುದಾಯದ ಅಭ್ಯರ್ಥಿಗಳೇ ಶಾಸಕರಾಗಿ ಆಯ್ಕೆಯಾಗುತ್ತಾರೆ.

ಹಾಗೆಯೇ ದಕ್ಷಿಣ ಕರ್ನಾಟಕವನ್ನು ಗಮನಿಸಿ. ಇಲ್ಲಿ ಎಲ್ಲೆಡೆ ನೇರಳೆ ಬಣ್ಣ ಕಾಣಿಸುತ್ತಿದೆ. ಅಂದರೆ, ಇಲ್ಲಿ ಒಕ್ಕಲಿಗ ಸಮುದಾಯದ ಜನ ಹೆಚ್ಚಿನ ಸಂಖ್ಯೆಯಲ್ಲಿ ನೆಲೆಸಿದ್ದಾರೆ. ಹಾಸನ, ಮಂಡ್ಯ, ರಾಮನಗರ, ಕೋಲಾರ ಜಿಲ್ಲೆ, ತುಮಕೂರಿನ ಕೆಲವು ಕ್ಷೇತ್ರಗಳು, ಬೆಂಗಳೂರು ನಗರದ ಕೆಲವು ಕ್ಷೇತ್ರಗಳು ಈ ವ್ಯಾಪ್ತಿಗೆ ಬರುತ್ತವೆ. ಅಂಥ ಕ್ಷೇತ್ರಗಳು 40ಕ್ಕೂ ಹೆಚ್ಚಿವೆ. ಸಾಮಾನ್ಯವಾಗಿ ಇಂಥ ಕ್ಷೇತ್ರಗಳಲ್ಲಿ ಒಕ್ಕಲಿಗ ಸಮುದಾಯದ ಅಭ್ಯರ್ಥಿಗಳೇ ಗೆಲ್ಲುವುದು ಸಾಮಾನ್ಯ.

ಕೆಂಪು ಬಣ್ಣದ ಗೋಳವನ್ನು ಗಮನಿಸಿ. ಇಂಥ ವೃತ್ತಗಳು ರಾಜ್ಯದಲ್ಲಿ ಸುಮಾರು 55 ಇವೆ. ಅಂದರೆ ಇದರರ್ಥ ಸುಮಾರು 55 ಕ್ಷೇತ್ರಗಳಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಪ್ರಾಬಲ್ಯ ಇದೆ ಎಂದು.





2 ನಾವು ನಿರ್ಣಾಯಕರು

ರಾಜ್ಯದ ಪ್ರತಿ ಕ್ಷೇತ್ರಗಳಲ್ಲಿ ಎರಡನೇ ಸ್ಥಾನದಲ್ಲಿರುವ ಸಮುದಾಯವನ್ನು ಈ ನಕ್ಷೆ ನಿಮ್ಮ ಕಣ್ಣಮುಂದೆ ಇಡುತ್ತದೆ. ಅಂದರೆ, ಆ ಕ್ಷೇತ್ರದಲ್ಲಿರುವ ಎರಡನೇ ಅತಿ ಹೆಚ್ಚಿನ ಸಂಖ್ಯೆಯಲ್ಲಿರುವ ಜಾತಿಗಳಾವುವು ಎನ್ನುವುದನ್ನು ಈ ನಕ್ಷೆ ವಿವರಿಸುತ್ತದೆ. ಉದಾಹರಣೆಗೆ: ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಇರುವುದು ಲಿಂಗಾಯತರು (ಅಂದಾಜು 50,000) ಹಾಗೂ ಎರಡನೇ ಅತಿ ಹೆಚ್ಚಿನ ಸಂಖ್ಯೆಯಲ್ಲಿರುವುದು ಮುಸ್ಲಿಮರು (45,000). ಈ ನಕ್ಷೆಯಲ್ಲಿ ಎರಡನೇ ಅತಿ ಹೆಚ್ಚಿನ ಸಂಖ್ಯೆಯ ಸಮುದಾಯವನ್ನು ಬಣ್ಣದ ಮೂಲಕ ಚಿತ್ರಿಸಲಾಗಿದೆ. ಬಹುತೇಕ ಕ್ಷೇತ್ರಗಳಲ್ಲಿ ಅತಿ ಹೆಚ್ಚಿನ ಸಂಖ್ಯೆಯ ಸಮುದಾಯ ಹಾಗೂ ಎರಡನೇ ಅತಿ ಹೆಚ್ಚಿನ ಸಂಖ್ಯೆಯ ಸಮುದಾಯಗಳ ನಡುವಿನ ಅಂತರ ಕೆಲವೇ ಸಾವಿರಗಳಾಗಿರುತ್ತವೆ.

ಈ ನಕ್ಷೆಯನ್ನು ಗಮನಿಸಿ: ಕೆಂಪು ಬಣ್ಣವೇ ಎಲ್ಲೆಡೆ ಕಾಣಿಸಿಕೊಳ್ಳುತ್ತಿದೆ. ಅಂದರೆ, ರಾಜ್ಯದಲ್ಲಿ ಎರಡನೇ ಅತಿ ಹೆಚ್ಚಿನ ಸಂಖ್ಯೆಯಲ್ಲಿರುವವರು ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜಾತಿಯ ಮಂದಿ. ಲಭ್ಯವಾದ ಮಾಹಿತಿ ಪ್ರಕಾರ 64 ಕ್ಷೇತ್ರಗಳಲ್ಲಿ ಪರಿಶಿಷ್ಟ ವರ್ಗ ಮತ್ತು ಜಾತಿಯ ಪ್ರಾಬಲ್ಯ ಇದೆ. ನಂತರದ ಸ್ಥಾನದಲ್ಲಿರುವುದು ಲಿಂಗಾಯತ ಸಮುದಾಯ. ಈ ಸಮುದಾಯ ರಾಜ್ಯದ 33 ಕ್ಷೇತ್ರಗಳಲ್ಲಿ ಎರಡನೇ ಸ್ಥಾನ ಹೊಂದಿದ್ದಾರೆ.

ಹಾಗೆಯೇ ನಕ್ಷೆಯಲ್ಲಿ ತಿಳಿ ಹಸಿರು ಬಣ್ಣ ಹರಡಿರುವುದನ್ನು ಗಮನಿಸಿದಿರಾ? ಈ ಬಣ್ಣ ಕುರುಬ ಸಮುದಾಯವನ್ನು ಉಲ್ಲೇಖಿಸುತ್ತದೆ. ಅಂದರೆ, 29 ಕ್ಷೇತ್ರಗಳಲ್ಲಿ ಈ ಸಮುದಾಯ ಪ್ರಾಬಲ್ಯ ಹೊಂದಿದೆ. ಯಾವುದೇ ಸಮುದಾಯ ಎರಡನೇ ಸ್ಥಾನದಲ್ಲಿದ್ದರೂ ಆ ಕ್ಷೇತ್ರದಲ್ಲಿ ಅದು ನಿರ್ಣಾಯಕ ಪಾತ್ರವನ್ನೇ ವಹಿಸುತ್ತದೆ. ಹಲವು ಸಂದರ್ಭಗಳಲ್ಲಿ ಅತಿ ಹೆಚ್ಚಿನ ಸಂಖ್ಯೆಯ ಸಮುದಾಯಕ್ಕಿಂತ ಎರಡನೇ ಅತಿ ಹೆಚ್ಚಿನ ಸಂಖ್ಯೆಯ ಸಮುದಾಯವೇ ಅಭ್ಯರ್ಥಿಯ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದ ನಿದರ್ಶನಗಳೂ ಇವೆ.

ಇತರರು | ಲಿಂಗಾಯತರು | ಒಕ್ಕಲಿಗರು | ಪರಿಶಿಷ್ಟರು | ಮುಸ್ಲಿಮರು | ಬಿಲ್ಲವರು | ಬ್ರಾಹ್ಮಣರು | ಮರಾಠರು | ಬಂಟರು | ಹಿಂದುಳಿದ ವರ್ಗ | ಕ್ರೈಸ್ತರು | ಕುರುಬರು

4ನೇ ಆಟಕ್ಕೆ ಸರಿ ಉತ್ತರ ನೀಡಿದ ವಿಜೇತರು

ವಿಜಯ ಕರ್ನಾಟಕ ಪ್ರಸ್ತುತಪಡಿಸಿದ 'ಚುನಾವಣಾ ರಾಜಕೀಯ ಆಟ'ದ ನಾಲ್ಕನೇ ಸರಣಿಯ ಆಟಕ್ಕೆ ಹೆಚ್ಚಿನ ಎಸ್‌ಎಂಎಸ್‌ಗಳು ಈ ಸಲ ಬಂದಿವೆ. ಕಳೆದ ಸಲದ ಪ್ರಶ್ನೆ ಹೀಗಿತ್ತು :

ಒಂದು ಹಂತದಲ್ಲಿ 13ನೇ ವಿಧಾನಸಭೆಯ ಸದಸ್ಯ ಬಲ ಹೀಗಿತ್ತು : ಬಿಜೆಪಿ 121, ಕಾಂಗ್ರೆಸ್ 71, ಜೆಡಿಎಸ್ 26 ಹಾಗೂ ಪಕ್ಷೇತರರು.

ಈಗ ಆಟಕ್ಕೆ ಬರೋಣ. ಮೇಲೆ ನೀಡಿರುವ ಪಟ್ಟಿಯ ಪ್ರಕಾರ ಬಿಜೆಪಿ, ಕಾಂಗ್ರೆಸ್, ಜೆಡಿಎಸ್‌ನ ಒಬ್ಬೊಬ್ಬ ಶಾಸಕರು ಕೇಳಿದ ಸರಾಸರಿ ಪ್ರಶ್ನೆಗಳೆಷ್ಟು?

ಸರಿಯುತ್ತರ: ಉತ್ತರ ಬಿಜೆಪಿ 16, ಕಾಂಗ್ರೆಸ್ 77, ಜೆಡಿಎಸ್ 92, ಇತರರು 28

ಸರಿ ಉತ್ತರ ನೀಡಿದ ಮೂರು ಮಂದಿಯನ್ನು ಆಯ್ಕೆ ಮಾಡಲಾಗಿದೆ.ಅದೃಷ್ಟಶಾಲಿ ಓದುಗರು:

ವಿಜಯ ಕುಮಾರ್, ಶಿರಾಳಕೊಪ್ಪ, ಶೀತಲ್ ವಿ. ಪಂಡಿತ್, ಚಡಚಣ, ವಿಜಾಪುರ, ಎ. ಅನಂತ್, ಹುಬ್ಬಳ್ಳಿ

ವಿಜೇತರಿಗೆ 'ವಿಜಯ ಕರ್ನಾಟಕ'ದ ಅಭಿನಂದನೆಗಳು.

ಚುನಾವಣಾ ಪ್ರಕ್ರಿಯೆ ಮುಗಿದು ಹೊಸ ಸರಕಾರ ರಚನೆಯಾದ ನಂತರ ವಿಜೇತರಿಗೆ ಬಹುಮಾನ ವಿತರಿಸಲಾಗುವುದು.

ಈ ಬಾರಿಯ ಆಟ

ಈ ಹಿಂದೆ ವಿಜಯ ಕರ್ನಾಟಕದಲ್ಲಿ ಪ್ರಕಟವಾದ ಸಮೀಕ್ಷೆಯ ಪ್ರಕಾರ ಮತ ಚಲಾಯಿಸುವಾಗ ಪಕ್ಷವೇ ಮುಖ್ಯ ಎಂಬ ಉತ್ತರ ಕೊಟ್ಟ ಮತದಾರರು ಅನೇಕರು. ಕೆಳಗೆ ನೀಡಲಾದ ನಕ್ಷೆಯನ್ನು ಆಧರಿಸಿ, 'ಪಕ್ಷ ಮುಖ್ಯ' ಎಂಬ ಉತ್ತರ ಬಂದ ಕ್ಷೇತ್ರಗಳೆಷ್ಟು?

sms

ಎಸ್‌ಎಂಎಸ್ ಮಾಡಿ, ಸರಿ ಉತ್ತರ ಬರೆದು ಬಹುಮಾನ ಗೆಲ್ಲಿ: VK ಎಂದು ಬರೆದು ಸ್ಪೇಸ್ ಬಿಟ್ಟು election ಎಂದು ಬರೆದು ಮತ್ತೆ ಸ್ಪೇಸ್ ಬಿಟ್ಟು ನಿಮ್ಮ ಉತ್ತರ ಟೈಪ್ ಮಾಡಿ ಬಳಿಕ ಹೆಸರು, ವಯಸ್ಸು, ಊರಿನ ಹೆಸರು ಬರೆದು 58888ಗೆ ಎಸ್‌ಎಂಎಸ್ ಮಾಡಿ.



3 ವೋಟ್ ಹಾಕುವಾಗ ಯಾವುದು ಮುಖ್ಯ?

ಇಂಥದ್ದೊಂದು ಪ್ರಶ್ನೆಯನ್ನು ಈಚೆಗೆ ವಿಜಯ ಕರ್ನಾಟಕ ಪ್ರಸ್ತುತಪಡಿಸಿದ್ದ ದಕ್ಷ್- ಎಡಿಆರ್ ಸಮೀಕ್ಷೆಯಲ್ಲಿ ಮತದಾರರನ್ನು ಕೇಳಲಾಗಿತ್ತು. ನೀವು ಮತ ಚಲಾಯಿಸುವಾಗ ಅಭ್ಯರ್ಥಿಯ ಜಾತಿಯನ್ನು ಗಮನಿಸುತ್ತೀರಾ? ಬರೇ ಅಭ್ಯರ್ಥಿಯ ವ್ಯಕ್ತಿತ್ವವನ್ನು ಮಾತ್ರ ಗಮನಿಸುವಿರಾ ಅಥವಾ ಪಕ್ಷವನ್ನು ನೋಡಿ ವೋಟ್ ಹಾಕುವಿರಾ ಎಂಬ ಪ್ರಶ್ನೆಗಳಿಗೆ ಮತದಾರರು ನೀಡಿದ್ದ ಉತ್ತರ ವಿಭಿನ್ನವಾಗಿತ್ತು . ಈ ಉತ್ತರಗಳ ಕ್ಷೇತ್ರವಾರು ವಿವರವನ್ನು ವಿಜಯ ಕರ್ನಾಟಕ ಈಗಾಗಲೇ ಪ್ರಕಟಿಸಿದೆ. ಇವುಗಳೆಲ್ಲವನ್ನೂ ಒಟ್ಟಾರೆ ನೋಡಿದರೆ ಹೇಗೆ ಕಾಣುತ್ತದೆ ಎನ್ನುವುದನ್ನು ಈ ನಕ್ಷೆಯ ಮೂಲಕ ನೋಡಬಹುದು.

ರಾಜ್ಯದ ಬಹುಪಾಲು ಕ್ಷೇತ್ರಗಳಲ್ಲಿ ಅಭ್ಯರ್ಥಿಗಳೇ ಮುಖ್ಯ ಎಂಬ ಉತ್ತರ ಬಂದಿದೆ. ಇದನ್ನು ನೇರಳೆ ಬಣ್ಣದ ವೃತ್ತದ ಮೂಲಕ ನೋಡಬಹುದು. ಅಭ್ಯರ್ಥಿಗಳು ಯಾವುದೇ ಪಕ್ಷದಲ್ಲಿದ್ದರೂ, ಯಾವುದೇ ಜಾತಿಯಾಗಿರಲಿ ಅದಕ್ಕೆಲ್ಲ ತಲೆ ಕೆಡಿಸಿಕೊಳ್ಳುವುದಿಲ್ಲ ಎನ್ನುವ ಆಲೋಚನೆ ರಾಜ್ಯದ ಬಹುತೇಕ ಕ್ಷೇತ್ರಗಳಲ್ಲಿನ ಮತದಾರರಲ್ಲಿರುವುದು ಸ್ಪಷ್ಟ.

ಹಳದಿ ಬಣ್ಣದ ವೃತ್ತವನ್ನು ನೋಡಿದಿರಾ? ಇದು ಜಾತಿಯೇ ಮುಖ್ಯವಾಗುತ್ತದೆ ಎಂದು ಹೇಳಿದ ಕ್ಷೇತ್ರಗಳು. ವಿಶೇಷವೆಂದರೆ ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳು ಮತ್ತು ಬೆಂಗಳೂರಿನ ಕೆಲವು ಕ್ಷೇತ್ರಗಳು ಈ ವ್ಯಾಪ್ತಿಗೆ ಬರುತ್ತವೆ.

ಕೆಂಪು ಬಣ್ಣದ ವೃತ್ತಗಳು ಅಭ್ಯರ್ಥಿಗಳ ಪಕ್ಷವನ್ನು ನೋಡಿ ಮತ ಹಾಕುತ್ತೇವೆ ಎಂದು ಮತದಾರರು ಹೇಳಿದ ಕ್ಷೇತ್ರಗಳು.



ಅಭ್ಯರ್ಥಿ ಮುಖ್ಯ | ಪಕ್ಷ ಮುಖ್ಯ | ಜಾತಿ ಮುಖ್ಯ

ಟಾಪ್ 10 ಅತಿ ಹೆಚ್ಚಿನ ಸಂಖ್ಯೆಯಲ್ಲಿರುವ ಸಮುದಾಯ ಮತ್ತು ಕ್ಷೇತ್ರ

| | |